## Smuggling of Sandalwood from Forests of South Kanara District

160. Sri B. M. IDINABBA (Mangalore-II).—

Will the Minister of State for Forests be pleased to state:—

(*a*) the number of cases wherein not only costly trees but also Sandal trees were removed stealthily and transported from Government Forest of South Kanara District during 1966-67 and 1967-68;

(*b*) out of them in how many cases suits have been filed;

(*c*) the number of persons arrested in this behalf;

(*d*) whether they are not thinking of taking drastic action to prevent removing of trees stealthily?

Sri ALUR HANUMANTHAPPA (Minister of State for Forests).—

(*a*) The number of cases wherein trees have been removed stealthily and transported from Government Forests of South Kanara District are as follows:

| | | |
|---|---|---|
| 1966-67 | ... | 236 |
| 1967-68 | ... | 415 |

(*b*) Suits have been filed in 103 cases.

(*c*) 7 persons have been arrested.

(*d*) Action is being taken to prevent removing of trees stealthily.

ಶ್ರೀ ಬಿ. ಎಂ. ಇದಿನಬ್ಬ.—(ಅ) ಗೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಾರಿ ಅರಣ್ಯಗಳಿಂದ ಕಳ್ಳತನದಿಂದ ಮರಗಳನ್ನು ಕಡಿದು ಸಾಗಿಸಿದ ಒಟ್ಟು ಪ್ರಕರಣಗಳು 1966-67 ರಲ್ಲಿ 236 ಮತ್ತು 1967-68 ರಲ್ಲಿ 415 ಎಂದು ಹೇಳಿದ್ದೀರಿ. ಇದರಲ್ಲಿ 103 ಪ್ರಕರಣಗಳ ಬಗ್ಗೆ ದಾವೆ ಹಾಕಲಾಗಿದೆ ಎಂದು ಹೇಳಿದ್ದೀರಿ. ಉಳಿದವುಗಳನ್ನು ಬಿಡಲಕ್ಕೆ ಕಾರಣ ಏನು ಸ್ವಾಮಿ ? ಅವರನ್ನು ಕಾಳಸಂತೆ ಖದೀಮರೆಂದು ಬಿಟ್ಟಿದ್ದೀರಾ ?

† ಶ್ರೀ ಆಲೂರು ಹನುಮಂತಪ್ಪ.—ಅವು ಕಾಂಪೌಂಡಬಲ್ ಕೇಸಸ್ ಆಗದೇ ಇದ್ದುದರಿಂದ 103 ಕೇಸಸ್ ಹಾಕಿದ್ದೇವೆ. ಎಷ್ಟೋ ಜನಕ್ಕೆ ಜುರ್ಮಾನೆ ಆಗಿದೆ, ಎಷ್ಟೋ ಜನಕ್ಕೆ ಶಿಕ್ಷೆ ಆಗಿದೆ. ಎಷ್ಟೋ ವಾಹನಗಳನ್ನು ಸ್ವಾಧೀನಪಡಿಸಿಕೊಂಡಿದೆ.

ಶ್ರೀ ಬಿ. ಎಂ. ಇದಿನಬ್ಬ.—ಎಷ್ಟು ಕೇಸಸ್‌ನಲ್ಲಿ ಶಿಕ್ಷೆ ಆಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಕುಂದಾಪುರ ಡಿವಿಷನ್‌ನಲ್ಲಿ ಒಟ್ಟು 3 ಕೇಸ್‌ನಲ್ಲಿ ಶಿಕ್ಷೆ ಆಗಿದೆ. ಅದರಪೈಕಿ 1966-67 ರಲ್ಲಿ ಒಂದು ಇದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೆಲವು ಕೇಸುಗಳಲ್ಲಿ ಫಾರೆಸ್ಟ್ ಇಲಾಖೆಯವರೇ ಕಳ್ಳ ಸಾಗಾಣಿಕೆಯಲ್ಲಿ ಸೇರಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅಂತಹ ಸಂದರ್ಭದಲ್ಲಿ ಅಫಿಷಿಯಲ್ಸ್ ಮೇಲೆ ಕ್ರಮ ತೆಗೆದು ಕೊಂಡಿದ್ದೇವೆ. ಸಸ್‌ಪೆನ್‌ಷನ್ ಕೂಡ ಆಗಿದೆ. ಎನ್‌ಕ್ವೈರಿ ರಿಪೋರ್ಟ್ ಕೂಡ ಆಗಿದೆ.

ಶ್ರೀ ಜಿ. ಟಿ. ಗೋವಿಂದರೆಡ್ಡಿ.—ಅರಣ್ಯದಲ್ಲಿರುವ ಫಾರೆಸ್ಟ್ ಗಾರ್ಡ್‌ಗೆ ಅವರ ಆತ್ಮರಕ್ಷಣೆಗೆ ಶಸ್ತ್ರವನ್ನು ಏನಾದರೂ ಕೊಟ್ಟಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಅದು ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಎನ್. ಜಿ. ಹಾಲಪ್ಪ.—ಸ್ಯಾಂಡಲ್ ಮೇಲೆ ಎಷ್ಟು ಕೇಸಸ್ ಹಾಕಿದ್ದೀರಿ ? ಪೋಲೀಸಿನವರಿಗೆ ಎಷ್ಟು ದೂರು ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಸ್ಯಾಂಡಲ್ ಮೇಲೆ ಹಾಕುವ ಕೇಸಸ್ ಬೇರೆ ಬೇರೆ ರೀತಿಯಲ್ಲಿ ಅಫೆನ್ಸ್‌ಸ್ ಆಗುತ್ತದೆ. ತೆಫ್ಟ್ ಆಗಿದ್ದರೆ ಪೋಲೀಸನವರಿಗೆ ದೂರು ಕೊಟ್ಟು ಫಾರ್ಜಿಷೀಟ್ ಹಾಕಿರುವುದು ಬೇಕಾದಷ್ಟು ಇವೆ. ಬೇರೆ ಬೇರೆ ರೀತಿಯಲ್ಲಿ ಅಫೆನ್ಸ್ ಆಗಿ ಕಾಂಪೌಂಡ್ ಮಾಡಿ ಸರ್ಕಾರಕ್ಕೆ ಹಣ ವಸೂಲು ಮಾಡಿರುವುದೂ ಬೇಕಾದಷ್ಟು ಇವೆ.

ಶ್ರೀ ಹೆಚ್. ಬಿ. ಜ್ಯಾಲನಯ್ಯ.—ದಕ್ಷಿಣ ಕನ್ನಡ ಮತ್ತು ಹಾಸನ ಜಿಲ್ಲೆಯಲ್ಲಿ ಗಂಧದ ಮರವನ್ನು ಕದ್ದು ಮುಂಬಯಿಗೆ ರೈಲ್ವೆ ಸ್ಟೇಷನ್ನಿನಲ್ಲಿ ರೈಲ್ವೆ ಪೋರ್ಟರ್ಸ್ ಮತ್ತು ರೈಲ್ವೆ ಅಧಿಕಾರಿಗಳು ಸೇರಿ ರಾಜಾಸ್ಥಾನಕ್ಕೆ ಕಳುಹಿಸುತ್ತಿದ್ದುದು ತಮ್ಮ ಗಮನಕ್ಕೆ ಬಂದಿದೆಯೇ? ರಾಜಾಸ್ಥಾನದಲ್ಲಿ ಪ್ರಚುಚದಲ್ಲಿ ಹೆಸರುವಾಸಿಯಾದಂಥ ಮೈಸೂರು ಗಂಧದ ಮರವನ್ನು ಮೆಟ್ರಿಕ್ ಟನ್ ಒಂದಕ್ಕೆ 15-20 ಸಾವಿರ ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆ. ಹೀಗೆ ಗಂಧದ ಮರಗಳನ್ನು ಕದ್ದು ಮಾರುವುದನ್ನು ರಾಜಸ್ಥಾನ ಸರ್ಕಾರದವರೂ ಮೈಸೂರು ಸರ್ಕಾರದವರೂ ಸೇರಿ ಹಿಡಿಯುವ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಜನರಲ್ ಕೊಶ್ಚನ್. ಮತ್ತೊಂದು ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಸಿದ್ದಯ್ಯ ಕಾಶೀಮಠ.—ಗಂಧದ ಕಳ್ಳ ಸಾಗಾಣಿಕೆ ದಿನೇ ದಿನೇ ಹೆಚ್ಚಾಗುತ್ತಾ ಇರುವುದರಿಂದ ಅದನ್ನು ಪತ್ತೆ ಮಾಡಲು ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ನಾವು ಅಂಟಿ ಸ್ಮಗ್ಲಿಂಗ್ ಸ್ಕ್ವಾಡ್‌ನು ಇಟ್ಟಿದ್ದೇವೆ. ಅವರು ಬೇಕಾದಷ್ಟು ಕೇಸನ್‌ಗಳನ್ನು ಹಿಡಿದಿದ್ದಾರೆ. ಅದನ್ನು ಪತ್ರಿಕೆಗಳಲ್ಲಿ ನೋಡಿದರೆ ಗೊತ್ತಾಗುತ್ತದೆ. ಗಂಧದ ಮಂದ ಮೇಲೆ ಸರ್ಕಾರದ ಸಂಪೂರ್ಣ ಅಧಿಕಾರ ಇದೆ. ಇದಲ್ಲದೆ ಯಾರು ಯಾರು ಅವರ ವರ ಫೀಲ್ಡ್‌ನಲ್ಲಿ ಗಂಧದ ಸಾಕಾಣಿಕೆ ಮಾಡುತ್ತಾರೋ ಅವರಿಗೆ ಮೈಂಟೆನನ್ಸ್ ಖರ್ಚು ಕೊಡುತ್ತೇವೆ ಅದನ್ನು ಮಾರಾಟ ಮಾಡಿದ ಮೇಲೆ ಬಂದ ಹಣದಿಂದ 100ಕ್ಕೆ 50 ಪರ್ಸೆಂಟ್ ಆಷ್ಟು ಇನ್‌ಸೆಂಟೀವ್ ಆಗಿ ಕೊಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಸುಬ್ಬರಾವ್ ಹಲ್ಸನಾಡ್.—ಕುಂದಾಪುರದಲ್ಲಿ ಗಂಧದಮರಗಳು ಕಳುವಾಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಎಂ. ಎಂ. ಜಾಲಿಸಟ್ಟಿ.—1966-67 ಮತ್ತು 1967-68 ನೇ ಸಾಲಿನಲ್ಲಿ ಕಳ್ಳತನ ಮಾಡಿರುವ ಅಂಕೆಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ಎಷ್ಟು ಕೇಸುಗಳು ಮುಗಿದು ಅವರಿಗೆ ಎಷ್ಟು ಜುಲ್ಮಾನೆ ವಸೂಲು ಮಾಡಲಾಗಿದೆ ? ಉಗ್ರ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಯಾವ ರೀತಿ ಉಗ್ರ ಕ್ರಮವನ್ನು ಸರಕಾರ ಇದುವರೆಗೆ ತೆಗೆದುಕೊಂಡಿದೆ ?

ಶ್ರೀ ಆಲೂರು ಹನುಮಂತಪ್ಪ.—ಎಷ್ಟು ಕೇಸುಗಳು ಎನ್ನುವ ವಿವರಗಳನ್ನು ಕೊಡಲಾಗಿದೆ ಇದರಲ್ಲಿ ಕೆಲವರಿಗೆ ಫೈನ್ ವಿಧಿಸಲಾಗಿದೆ ಮತ್ತು ಶಿಕ್ಷೆಗಳನ್ನೂ ಕೋರ್ಟಿನವರು ಕೊಟ್ಟಿದ್ದಾರೆ. ಇವರಿಂದ ಕಾಂಪನ್‌ಸೇಷನ್ ಮೂಲಕ ಬಂದಿರುವ ವಿವರಗಳು ಹೀಗಿವೆ : 1966-67 ರಲ್ಲಿ 40,250 ರೂಪಾಯಿಗಳು, 1968-69 ರಲ್ಲಿ 75,762 ರೂಪಾಯಿಗಳು, ಕುಂದಾಪುರದಲ್ಲಿ 1966-67 ರಲ್ಲಿ 19,967 ರೂಪಾಯಿಗಳು ಮತ್ತು 1968-69 ರಲ್ಲಿ 52,348 ರೂಪಾಯಿಗಳು ಬಂದಿವೆ.

Smt. WINNIFRED F. FERNANDES —Has it come to the notice of the Government that there is some understanding between the Forest Authorities and the persons who steal the sandalwood ?

Sri ALUR HANUMANTHAPPA.—It is the information of the Hon. Member.

ಶ್ರೀ ಎಂ. ಎಂ. ಜಾಲಿಸಟ್ಟಿ.—ಮಾನ್ಯ ಮಂತ್ರಿಗಳು ಇಲ್ಲಿ ಉಗ್ರಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಏನು ಉಗ್ರ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಕೋರ್ಟಿನಲ್ಲಿ ಕೇಸುಗಳು ಬಂದ ಮೇಲೆ ಕೆಲವರಿಗೆ ಶಿಕ್ಷಗಳಾಗಿರುತ್ತವೆ ಮತ್ತು ಕೆಲವರಿಂದ ಫೈನ್ ಹಾಗೂ ಶಿಕ್ಷೆಗಳೂ ಆಗಿರುತ್ತವೆ. ರೂಲ್ಸು ಪ್ರಕಾರ ಮ್ಯಾಕ್ಸಿಮಂ ಹಾಗೂ ಮಿನಿಮಂ ಪನಿಷ್‌ಮೆಂಟ್ ಎಂದು ಇರುತ್ತದೆ ; ಇದರಂತೆ ಇಲಾಖೆಯ ಅಧಿಕಾರಿಗಳು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ ಮತ್ತು ಫೈನ್‌ಗಳನ್ನು ರಿಕವರಿ ಮಾಡುತ್ತಾರೆ.

ಶ್ರೀ ಎಂ. ನಾಗಪ್ಪ.—ನೂಟ್ಸ್ ಎಂದು ಹೇಳಿದ್ದೀರಿ? ಇವು ಸಿವಿಲ್ ನೂಟ್ಸ್‌ಗಳೇ ಇಲ್ಲವೇ ಕ್ರಿಮಿನಲ್ ನೂಟ್ಸ್‌ಗಳೇ ತಿಳಿಸುತ್ತೀರಾ ಮತ್ತು ಉಗ್ರ ಕ್ರಮ ತೆಗೆದುಕೊಳ್ಳಲಾಗಿದೆ ಎಂದರೆ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗಿದೆ ಹೇಳುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಇವೆಲ್ಲಾ ಕ್ರಿಮಿನಲ್ ಕೇಸುಗಳು. ಇವು ಕ್ರಿಮಿನಲ್ ಪ್ರೊಸೀಜರು ಕೋಡು ಪ್ರಕಾರ ಆದ ಕೇಸುಗಳು. ನಿಯಮದಂತೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ.

## Lists of Elected Members of Village Panchayats

171. Sri S. H. PUTTARANGANATH (Belur).—

Will the Minister for Development be pleased to state:—

(*a*) whether the Government is maintaining the list of elected members of Village Panchayats, Taluk Boards and Municipal Councils belonging to Scheduled Castes and Tribes;

(*b*) whether there is a proposal before the Government to compile such lists and place it on the Table of the House for the information of the members;

(*c*) the number of members elected to the above Bodies, other than to the reserved seats, belonging to Scheduled Castes and Tribes?

Sri B. L. GOWDA (Deputy Minister for Co-operation).—

(*a*) The Government are not maintaining such lists.

(*b*) No.

(*c*) Such information is not also maintained. However, if the member so desires it will be obtained and furnished to him.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಇಲ್ಲಿ ಪಟ್ಟಿಗಳನ್ನು ಇಡುತ್ತಿಲ್ಲ ಎಂದು ಹೇಳಿದರೆ ಸರಕಾರ ಈ ನಭೆಗೆ ಉತ್ತರ ಕೊಡುವಾಗ ಮಿಸ್‌ಲೀಡ್ ಮಾಡುತ್ತಾರೆ ಎಂದು ಅರ್ಥ ಮಾಡಿಕೊಳ್ಳೋಣವೇ?

†ಶ್ರೀ ಬಿ. ಎಲ್. ಗೌಡ.—ಸರಕಾರದವರು ಪಟ್ಟಿ ಇಟ್ಟಿಲ್ಲ. ಆದರೆ ಪಂಚಾಯಿತಿಗಳಲ್ಲಿ ಹಾಗೂ ತಾಲ್ಲೂಕು ಬೋರ್ಡ್‌ಗಳಲ್ಲಿ ಮತ್ತು ಜಿಲ್ಲೆಗಳಲ್ಲಿರುವ ಡೆಪ್ಯುಟಿ ಕಮಿಷನರುಗಳು ಈ ಪಟ್ಟಿಗಳನ್ನು ಮಾಡಿರುತ್ತಾರೆ. ಇಂತಹ ಪಟ್ಟಿಗಳು ಬೇಕಾದರೆ ಅವರಿಂದ ತರಿಸಿಕೊಡಬಹುದು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರ (ಸಿ) ನಲ್ಲಿ ಹೀಗೆ ಇದೆ:

> "Such information is not also maintained. However, if the member so desires it will be obtained and furnished to him"

ಎಂದರೆ ನಾನು ಕೇಳಿಲ್ಲ ಅದರಿಂದ ನನಗೆ ಕೊಡಬೇಕಾಗಿಲ್ಲ ಎಂದು ಅರ್ಥ ಮಾಡೋಣವೇ?

ಶ್ರೀ ಬಿ. ಎಲ್. ಗೌಡ.—ಸರಕಾರದವರು ಇಂತಹ ಒಂದು ಪಟ್ಟಿಯನ್ನು ಕ್ರೋಢೀಕರಿಸಿ ಮಾಡಿಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ತರಿಸಿಕೊಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹರಿಜನರ ಹಾಗೂ ಗಿರಿಜನರ ಮೀನಲು ಸ್ಥಾನಗಳನ್ನು ಹತ್ತು ಹತ್ತು ವರ್ಷಕ್ಕೊಂದು ಸಾರಿ ನಮ್ಮ ಮುಂದೆ ಇಡಬೇಕೆಂದು ಬರುತ್ತಿರುವುದರಿಂದ ಇಂತಹ